ಎಂದು ಬೈದುಕೊಳ್ಳುತ್ತ ಆಕಡೆ ಈಕಡೆ ಕೂತಿತ್ತಲೆ ಮಾಗಾಡುತ್ತಿದ್ದ. 'ನನ್ಮಗ ಅಂತನಲ್ಲ ಕಂಡ್ರಪ್ಪ, ಎಲ್ಲೋದೊ ಟಿಪ್ಪಣ್ಣ ಬಾರಪ್ಪ' ಎಂದು ಗಂಗಮ್ಮ ಕೂಗಿಕೊಳ್ಳತೊಡಗಿದಳು. ದುರ್ಗಯ್ಯ ಕೈಲೊಂದು ಬ್ಯಾಟ್ರಿ ಹಿಡಿದು ಮಗನನ್ನು ಹುಡುಕಲು ಕತ್ತಲನ್ನು ಸೀಳಿಕೊಂಡು ಹೊರಟ.

ಇನ್ನ ಬೆಳ್ಗರ್ದಗ ಕುಲ್ವಾಡಿ ತಿಮ್ಮಜ್ಜನ ಹೆಂಡ್ತಿ ಮಗಳು ಅಳಿಯ ಎಲ್ಲ ಬುದ್ದೇರ ಹೈಸ್ಕೂಲತ್ರ ಪ್ರತ್ಯಕ್ಷ. ರಾತ್ರೆಲ್ಲ ಊಟ ನಿದ್ದೆ ಇಲ್ದೆ ಸೊರಗೋಗಿದ್ದರೂ ಕಣ್ಣುಗಳಲ್ಲಿ ನೀರು ಹನಿಯುತ್ತಲೇ ಇತ್ತು. ಹುಡುಗ್ರು ಮೇಷ್ಟ್ರುಗಳೆಲ್ಲ ನಿಧಾನಕ್ಕೆ ಜಮಾಯಿಸುತ್ತ ಹೋದರು. ಇವ್ರೆ ಹೆಡ್ ಮಾಷ್ಟ್ರು ಅಂತ ಗೊತ್ತಾದದ್ದೆ ತಡ ದುರ್ಗಯ್ಯ ಓಡೋಗಿ ಕಾಲಿಡ್ಕಂಡು 'ನನ್ಮಗುನ್ನ ಕರ್ಸಿ ಬುದ್ದಿ' ಎಂದು ಗೋಳಿಡತೊಡಗಿದ. ಉಳಿದವರೂ ಕಂಡ ಕಂಡ ಮೇಷ್ಟ್ರುಗಳ ಕಾಲಿಡ್ಕಂಡು ಅಂಗಾಲಾಚುತ್ತಿರಲು... ಆಕಡೆಯಿಂದ ಜೀಪಿನಲ್ಲಿ ದೇವ್ರಾಜಣ್ಣ ಮತ್ತವರ ಕಡೆಯವರು ದಡದಡನೆ ನುಗ್ಗಿ ಬಂದರು. ಹಿಂದಗಡೆ ಡೋರಿನಿಂದ ಟಿಪ್ಪುವಿನ ಕೊಳ್ಳಪಟ್ಟಿ ಹಿಡಿದು ಕೆಳಕ್ಕೆ ದೂಕಿದರು. ನೆಲಕ್ಕೆ ಬಿದ್ದ ನಿತ್ರಾಣಗೊಂಡಿದ್ದ ಟಿಪ್ಪುವನ್ನು ಆತುಕೊಳ್ಳಲು ತಾಯಿ ಅಜ್ಜಿ ಓಡಲು. ದೇವ್ರಾಜಣ್ಣ ಕೆಳಗಿಳಿದು ಬಂದು 'ಸೂಳೆ ಮಗನೆ, ನಿನ್ ಮಗ್ನೆನೊ ಅವ್ನು, ಹುಟ್ಲಿಲ್ಲ ಅನ್ನಿಸಿ ಬಿಡ್ತಿನಿ ಇನ್ನೊಂದ್ಸಲ ಇಲ್ಲಿ ಕಂಡ್ರೆ. ಟಿಸಿ ತಗಂಡು ಹೋಗ್ತಾ ಇರು' ಎಂದು ಕಪಾಳಕ್ಕೆ ಎರೆಡು ಬಿಟ್ಟನು. ಅಷ್ಟೇ ತರಾತುರಿಯಲ್ಲಿ ಹೆಡ್ ಮಾಷ್ಟ್ರು ವಳಿಕೋಗಿ ಟಿಸಿ ಹರ್ಕಂಡು ಬಂದು ಹನುಮನ ಕೈಗೆ ಇಟ್ಟರು. ಹನುಮ, ತಿಮ್ಮಜ್ಜ, ಕರಿಯವ್ವ, ಗಂಗಮ್ಮ ಕುಂಟುತ್ತಿದ್ದ ಟಿಪ್ಪುನನ್ನು ಹೆಗಲ ಮೇಲಾಕಿಕೊಂಡು ಬುದ್ದೇರ ಸ್ಕೂಲಿಂದ ಹೊರಬರುತ್ತಿದ್ದರೆ ತರಗತಿಯ ಕಿಟಕಿಗಳಲ್ಲಿ ಸ್ಕೂಲ್ ಹುಡುಗ್ರು ಜಮಾಯಿಸಿ ಇತ್ತಗೇ ನೋಡುತ್ತಿದ್ದರು. ಎಂದಿನ ಕಲರವ ಅಲ್ಲಿರಲಿಲ್ಲ.

ಇನ್ನ ಬೆಳಗೆದ್ದು ಮಾರಿಹಬ್ಬ. ಅವಮಾನ ತಾಳಲಾರದೆ ಒತ್ತಿಮುಂಚೆ ಈ ಊರ ಬಿಟ್ಟೋಗ್ಬೇಕೆಂದು ನಿರ್ಧರಿಸಿದ ದುರ್ಗಯ್ಯ ದಂಪತಿ ಎಂಟುಗಂಟೆ ಬಸ್ ಹತ್ತಿ ಕೂತಿರಲು, ಅಜ್ಜ ತಿಮ್ಮಯ್ಯ ತನ್ನ ಕುಲ್ವಾಡ್ಕೆ ನಿಮಿತ್ತ ತಮಟೆ ಬಡಿಯುತ್ತ ಊರೊಳಗೆ ಸಾರಾಕುತ್ತಿದ್ದ. ಕಿಟಕಿ ಪಕ್ಕದಲ್ಲಿ ಕೂತಿದ್ದ ಟಿಪ್ಪುಗೆ ತನ್ನ ಅಜ್ಜ ಕಾಣಿಸದಿದ್ದರೂ ಅಜ್ಜನ ತಮಟೆ ಗಸ್ತಿನಲ್ಲಿ 'ನನ್ನ ಮೊಮ್ಮಗ ತಪ್ಪು ಮಾಡಿಲ್ಲ' ಎಂದು ಕಿವಿಯಲ್ಲಿ ಮಾರ್ದನಿಸಿದಂತಾಗುತ್ತಿತ್ತು.


## ಗುರುಪ್ರಸಾದ್ ಕಂಟಲಗೆರೆ

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕ್ಕಿನ ಕಂಟಲಗೆರೆಯವರು. ವೃತ್ತಿಯಲ್ಲಿ ಶಿಕ್ಷಕ. ತಳಸಮುದಾಯಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆಗಳಲ್ಲಿ ಆಸಕ್ತಿ. ಪ್ರಕಟಿತ ಕೃತಿಗಳು– 'ಕಪ್ಪುಕೋಣಗಳು' (ಕವನ ಸಂಕಲನ), 'ಗೋವಿನಜಾಡು' (ಕಥಾಸಂಕಲನ). ಸಾಹಿತ್ಯ ಅಕಾಡೆಮಿಗಾಗಿ 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ', 'ದಲಿತ ಕ್ರೈಸ್ತರ ಸಾಂಸ್ಕೃತಿಕ ಶೋಧ' ಸಂಶೋಧನಾ ಕೃತಿಗಳ ಸಲ್ಲಿಕೆ.